



**ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ**

ಚಲನಚಿತ್ರವೊಂದರ ಬಗ್ಗೆ ಬರೆಯುವಾಗ ಹೇಳಲಿಕ್ಕೆ ಹೆಚ್ಚಿನ ವಿಷಯಗಳಿಲ್ಲದಿದ್ದಾಗ ಅದರ ಕಥೆ ಹೇಳುವುದು ಬರವಣಿಗೆಯ ಒಂದು ತಂತ್ರ. ಸಿನಿಮಾ ಚೆನ್ನಾಗಿದ್ದರೂ, 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಸಿನಿಮಾದ ಕಥೆ ಹೇಳಲಿಕ್ಕೆ ಎರಡು ಕಾರಣಗಳಿವೆ. ಹಂಚಿಕೊಳ್ಳದೆ ಇರಲು ಸಾಧ್ಯವಿಲ್ಲ ಎನ್ನುವಂತಹ ಕೆಲವು ಕಥೆಗಳಿರುತ್ತವೆ. ಸ್ವಪ್ನದಂತಹ ಭಾಷೆಯೊಂದರ ಬೆನ್ನುಹತ್ತಿ ಹೋಗುವ ಭಾಷಾತಜ್ಞನೊಬ್ಬನ ಪ್ರಯತ್ನದ ಕುರಿತ ಈ ಸಿನಿಮಾದ ಕಥೆಯೂ ಹಂಚಿಕೊಂಡು ಆನಂದ ಹೆಚ್ಚಿಸಿಕೊಳ್ಳುವಂತಹದ್ದು. ಕಥೆಯ ಹಂದರವನ್ನು ಹೇಳಬಹುದೇ ಹೊರತು, ಅದರ ಅನುಭವವನ್ನು ಸಿನಿಮಾ ಮೂಲಕವಷ್ಟೇ ಕಟ್ಟಿಕೊಡಲು ಸಾಧ್ಯ ಎನ್ನುವ ನಂಬಿಕೆ ಕಥೆ ಹೇಳಲಿಕ್ಕಿರುವ ಎರಡನೇ ಕಾರಣ.

ಎರ್ನೆಸ್ಟೊ ಕಾನ್ಟ್ರಿಯಾನ್ಸ್ ಎನ್ನುವ ಮೆಕ್ಸಿಕನ್ ನಿರ್ದೇಶಕನ, 2017ರಲ್ಲಿ ತೆರೆಕಂಡ 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಎನ್ನುವ ಸ್ಪ್ಯಾನಿಷ್ ಭಾಷೆಯ ಸಿನಿಮಾದ ಕಥೆ ಸ್ಥೂಲವಾಗಿ ಹೀಗಿದೆ:

ಮಾರ್ಟಿನ್ ಎನ್ನುವ ಯುವ ಭಾಷಾಶಾಸ್ತ್ರಜ್ಞ, ವಿಶ್ವದಲ್ಲಿ ಕೇವಲ ಮೂರು ಜನರಷ್ಟೇ ಬಲ್ಲ ಝಿಕ್ರಿಲ್ ಎನ್ನುವ ಭಾಷೆಯ ಬಳ್ಳಿಗಳನ್ನು ಹುಡುಕಿಕೊಂಡು ಹೋಗುತ್ತಾನೆ. ಈ ಹುಡುಕಾಟದಲ್ಲಿ ಎದುರಾಗುವ ಅಜ್ಜಿಯೊಬ್ಬಳು, ಮಾರ್ಟಿನ್‌ನ ಝಿಕ್ರಿಲ್ ಪ್ರೀತಿಯ ಬಗ್ಗೆ ರೋಮಾಂಚನಗೊಳ್ಳುತ್ತಾಳೆ. ಆದರೆ, ಮಾರ್ಟಿನ್‌ನನ್ನು ಭೇಟಿಯಾದ ಸ್ವಲ್ಪ ಸಮಯಕ್ಕೇ ಆಕೆ ಕೊನೆಯುಸಿರೆಳೆಯುತ್ತಾಳೆ. ಹೀಗಾಗಿ ಝಿಕ್ರಿಲ್ ಇಬ್ಬರಿಗಷ್ಟೇ ಗೊತ್ತಿರುವ ಭಾಷೆಯಾಗುತ್ತದೆ.

ಮಾರ್ಟಿನ್ ಭೇಟಿಯಾಗುವ ಇಸಾವುರೊ ಹಾಗೂ ಎವರಿಸ್ಟೊ ಎನ್ನುವ ಇಬ್ಬರು ಘಾಟಿ ಮುದುಕರು ಉತ್ತರ ದಕ್ಷಿಣ ಧ್ರುವಗಳಂತಹವರು. ಇಬ್ಬರೂ ಮಾತುಬಿಟ್ಟು ಐವತ್ತು ವರ್ಷಗಳಾಗಿವೆ. ಇಸಾವುರೊನಿಗೆ ಝಿಕ್ರಿಲ್ ಬಿಟ್ಟರೆ ಬೇರೆ ಭಾಷೆ ಗೊತ್ತಿಲ್ಲ. ಆತ ಮಾರ್ಟಿನ್‌ನ ಸ್ನೇಹವನ್ನು ಒಪ್ಪಿಕೊಳ್ಳುತ್ತಾನೆ. ಆದರೆ, ಅಜ್ಜ ಏನು